ಶ್ರೀ ಕಾಗೋಡು ತಿಮ್ಮಪ್ಪ.—ಈಗ ಅದರ ಬಗ್ಗೆ ತಮಗೆ ಅಧಿಕಾರ ಇದೆಯೆಂದು ಗೊತ್ತಾಯಿತು. ಅದನ್ನು ತಮ್ಮ ಹತ್ತಿರ ಬಂದು ಚರ್ಚೆ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಂದಿರಾಗಾಂಧಿಯವರು ಗರೀಬಿ ಹಠಾವೋ ಮಾಡುತ್ತೇವೆಂದು ಹೇಳಿ, ಈಗ ಕಾಫಿ ಒಂದು ಕಪ್ಪಿಗೆ 75 ಪೈಸೆಯಾಗಿದೆ.

## Motion of Thanks to the Governer's Address (*Debate Continued*)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯವನ್ನು ಮಾನ್ಯ ಶ್ರೀ ಪ್ರಭಾಕರ್ ಅವರು ಮಂಡಿಸಿದ್ದಾರೆ. ಅವರ ನಿರ್ಣಯವನ್ನು ಬೆಂಬಲಿಸಿ ಮಾನ್ಯ ಶ್ರೀ ಸನದಿಯವರೂ ಸಹ ಮಾತನಾಡಿದ್ದಾರೆ. ನಾನು ಮೊಟ್ಟ ಮೊದಲನೆಯದಾಗಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಒಬ್ಬ ಹಳೆಯ ಸದಸ್ಯರೂ ಹಾಗೂ ಹೆಚ್ಚು ಅನುಭವಿಗಳಾದಂಥ, ಮಾನ್ಯ ಶ್ರೀ ಪ್ರಭಾಕರ್ ಅವರು ವಂದನಾ ನಿರ್ಣಯವನ್ನು ಮಂಡಿಸಿ ಸುದೀರ್ಘವಾದಂಥ ಭಾಷಣವನ್ನು ಮಾಡಿ ಬಹಳ ಜನರಿಗೆ ಒಂದು ತರಹ ಮನರಂಜನೆಯಾಗುವ ರೀತಿಯಲ್ಲಿ ಮಾತನಾಡಿದ್ದಾರೆ. ಕೊನೆಯಪಕ್ಷ ಅವರು ಹೇಳಿರುವುದು ಬಹಳವಾಗಿ ಪ್ರಿಯವಾಗದೇ ಇದ್ದರೂ ಅವರ ಭಾಷಣ ಮನರಂಜನೆಯಾಗಿತ್ತೆಂದು ನಾನು ಒಪ್ಪಿಕೊಳ್ಳುತ್ತೇನೆ.

ತಮಗೆ ಸಂದರ್ಭಕ್ಕೆ ತಕ್ಕಹಾಗೆ ಮನರಂಜನೆಮಾಡತಕ್ಕ ಪ್ರವೃತ್ತಿ ತಮಗೆ ಬಂದದ್ದು ಬಹಳ ಸಂತೋಷ. ಮಾನ್ಯ ರಾಜ್ಯಪಾಲರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗೆ ಜಂಟಿ ಅಧಿವೇಶನವನ್ನು ಕುರಿತು ಅವರು ಭಾಷಣಮಾಡತಕ್ಕ ಕಾಲದಲ್ಲಿ ಸರ್ಕಾರದವರು ಹಿಂದೆ ಈ ಸಭೆಗೆ ಏನೇನು ಕೆಲಸಕಾರ್ಯಗಳನ್ನು ಮಾಡುವುದಾಗಿ ಭರವಸೆಕೊಟ್ಟಿದ್ದರು ಆ ಬಗ್ಗೆ ಅವರು ಎಷ್ಟುಮಟ್ಟಿಗೆ ಅವುಗಳನ್ನು ನಾಥಿಸಿ ಸಫಲತೆಯನ್ನು ಪಡೆದಿದ್ದಾರೆಂಬ ಬಗ್ಗೆ ಮತ್ತು ಮುಂದಿನ ಒಂದು ವರ್ಷದಲ್ಲಿ ಸರ್ಕಾರದವರೇನು ರಾಜ್ಯದಲ್ಲಿ ಖಚಿತವಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದಾರೆಂಬುದನ್ನು ತಿಳಿಸಿರುವುದಿಲ್ಲ. ನಾನು ಅವರ ಭಾಷಣವನ್ನು ಸಮಗ್ರವಾಗಿ ಓದಿನೋಡಿದೆ. ಹಿಂದೆ ಇದೇ ಸಭೆಗೆ ಸರ್ಕಾರದವರೇನು ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದ್ದರು ಆ ಬಗ್ಗೆ ಏನಾಗಿದೆ ಎಂಬುದೇ ರಾಜ್ಯಪಾಲರ ಭಾಷಣದಲ್ಲಿಲ್ಲ. ಹಾಗೇ ಮುಂದಿನ ಸಾಲಿನಲ್ಲಿ ಸರ್ಕಾರದವರು ಕೈಗೊಳ್ಳಬೇಕೆಂದು ಉದ್ದೇಶಿರತಕ್ಕ ಕೆಲಸ ಕಾರ್ಯಗಳಾದರೂ ಏನೆಂಬ ವಿಚಾರದಲ್ಲೂ ಕೂಡ ಅವರ ಭಾಷಣ ಅಸ್ಪಷ್ಟವಾಗಿದೆ. ಅದರಲ್ಲಿ ಮುಖ್ಯವಾಗಿ ಹೇಳಬೇಕಾಗಿದ್ದ ವಿಚಾರಗಳೆಲ್ಲವೂ ಬಹಳ ಅಸ್ಪಷ್ಟವಾಗಿದೆ. ಅಂದರೇನಾಯಿತು ಆ ರಾಜ್ಯಪಾಲರು ಯಥಾವತ್ತಾಗಿ ಹಿಂದಿನಂತೆ ಇಲ್ಲಿ, ಇಲ್ಲಿ ಒಂದು ಗಿಳಿಪಾಠವನ್ನು ಈ ಸಭೆಗೆ ಒಪ್ಪಿಸುವುದಕ್ಕೆ ಬಂದಿದ್ದರೆಂದಾಯಿತು. ಅದರಂತೆ ಅವರು ಒಪ್ಪಿಸಿದ್ದಾರೆ ನಾವು ಈ ದಿವಸ ಆ ಗಿಳಿಪಾಠದ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ಹೊಸಮಾದರೀ ಸರ್ಕಾರ ಜಾರಿಗೆ ಬಂದಮೇಲೆ ಇಲ್ಲಿ ಏನಾದರೂ ಒಂದು ಹೊಸ ಕಲ್ಪನೆ ಪ್ರಕಾರ ಹೊಸಮಾದರಿಯಲ್ಲಿ ಕೆಲಸಕಾರ್ಯಗಳನ್ನು ನಡೆಸುತ್ತಿದ್ದಾರೆಯೇ ಎಂಬುದನ್ನು ನೋಡಿದರೆ, ಅದು ನಮ್ಮ ಒಂದು ಬರೀ ಕಲ್ಪನೆ ಅಥವಾ ಭ್ರಮೆಯಾಗಿರುತ್ತೆಂದು ಕಂಡುಬರುತ್ತಿದೆ. ರಾಜ್ಯದ ಏಳಿಗೆಗೆ ಬಹಳ ಅಗತ್ಯವಾದಂಥ ನೀರಾವರಿ, ವಿದ್ಯುತ್‌ಯೋಜನೆ ಮತ್ತು ಜನತಾಗೃಹ ಮಂಡಳಿಗಳ ಕಾರ್ಯವೈಖರಿತ್ತು ಇವುಗಳನ್ನು ಈ ಸರ್ಕಾರ ಸಂಪೂರ್ಣವಾಗಿ ಕೈಬಿಟ್ಟ ಹಾಗೆ ಕಂಡು ಬರುತ್ತಿದೆ. ಆದರ ರಾಜ್ಯಪಾಲರ ಭಾಷಣದಲ್ಲಿ ಏನು ಒಂದಂಶ ಕಂಡುಬರುತ್ತಿದೆಯೆಂದರೆ ಅಂತಂರಾಷ್ಟ್ರೀಯ ಹಾಗೂ ರಾಷ್ಟ್ರದಲ್ಲಿ ಹಣಕಾಸಿನ ಕೊರತೆಯುಂಟಾಗಿದೆ—ಅದರಿಂದ ನಮ್ಮ ಕೆಲಸಕಾರ್ಯಗಳು ಬಹಳಮಟ್ಟಿಗೆ ಕುಂಠಿತವಾಗಿವೆ ಎಂದು ಹೇಳಿದ್ದಾರೆ. ಆದರೆ ನಾವು ಇಲ್ಲಿ ನಮ್ಮ ಹಣಕಾಸಿನ ಕೊರತೆಯನ್ನು ನೀಗುವುದಕಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಂಡವು ಎಂಬ ವಿಚಾರವನ್ನೇ ಇವರು ತಮ್ಮ ಭಾಷಣದಲ್ಲಿ ಎಲ್ಲಿಯೂ ಹೇಳಿಲ್ಲ. ಇವರು ಆ ಕಾಳೀನದಿ ಯೋಜನೆ ಬಗ್ಗೆ ಬಹಳ ಲಘುವಾಗಿ ಮಾತನಾಡಲು ಹೊರಟಿದ್ದಾರೆ. ಆದರೆ ಆ ಥ ಒಂದು ಬೃಹತ್‌ಯೋಜನೆಯನ್ನೇ ಸರ್ಕಾರದವರು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆಂದು ನನಗೆ ಅನಿಸುತ್ತಿದೆ.

ಇನ್ನು ಮಾನ್ಯ ಕೆ. ಪ್ರಭಾಕರ್ ಅವರು ನಿರ್ಣಯವನ್ನು ಮಂಡಿಸುತ್ತ ಪಂಚಸೂತ್ರ ಪಂಚ ಶೀಲಗಳ ಬಗ್ಗೆ ಹೇಳಿದರು. ಮಾನ್ಯ ದಿವಂಗತ ನೆಹರೂರವರು ಚೈನಾಕ್ಕೆಹೋಗಿಬಂದ ನಂತರ ಆ

ಪಂಚಶೀಲದ ಬಗ್ಗೆ ಹೇಳುವುದಕ್ಕೆ ಹತ್ತಿದ್ದರು ಅದರಿಂದ ನಮ್ಮ ಭರತಖಂಡಕ್ಕೇ ಒಂದುಕು ತ್ತನ್ನು ತಂದಿತು. ಇಲ್ಲಿ ಸರ್ಕಾರದವರು ಮಾಡತಕ್ಕ ಕೆಲಸಕಾರ್ಯಗಳೇನಿವೆ ಅವುಗಳನ್ನು ಆ ಪಂಚಶೀಲದ ತತ್ವಕ್ಕೆ ಅನುಗುಣವಾಗಿ ನಡೆಸುತ್ತಾರೆಂದು ಹೇಳುವುದು ಅರ್ಥವಿಲ್ಲದ ಮಾತು. ಆ ಪಂಚಶೀಲಗಳೇನೆಂದರೆ ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಕಂಡುಬರುತ್ತಿರುವಂತೆ—(1) ಮನೆ ನಿವೇಶನವಿಲ್ಲದವರಿಗೆ ನಿವೇಶನ ಹಂಚಿಕೆ ಹಾಗೂ ಭೂಹೀನರಿಗೆ ಭೂಮಿಗಳ ಹಂಚಿಕೆ, (2) ಪರಿಣಾ ಮಕಾರಿ ರೀತಿಯಲ್ಲ ಭೂಸುಧಾರಣೆಗಳ ಅನುಷ್ಠಾನ, (3) ಜನತೆಗೆ ಮುಖ್ಯವಾಗಿ ನವಾಜದ ದುರ್ಬಲವರ್ಗಗಳಿಗೆ ದವಸಧಾನ್ಯಗಳ ಹಂಚಿಕೆ (4) ಸಣ್ಣ ರೈತರುಗಳಿಗೆ ಧನಸಹಾಯ, ನೀಡಿಕೆ ಮತ್ತು (5) ಸಹಕಾರಿ ಮತ್ತು ಪಂಚಾಯಿತಿ ರಾಜ್ಯಗಳನ್ನು ಬಲಪಡಿಸುವುದು. ನಮ್ಮ ಸರ್ಕಾರದ ವರೆನು ಈ ಐದು ಮುಖ್ಯ ಘೋಷಣೆಗಳನ್ನು ಹೊರಡಿಸಿದ್ದಾರೆ ಇವು ನಮಗೆ ಹೊಸವೇನೂ ಅಲ್ಲ. ಇವೆಲ್ಲಾ ಹಳೇ ಘೋಷಣೆಗಳೇ. ಅಂದರೆ ಹಳೇ ಹೆಂಡವನ್ನು ಹೊಸ ಬಾಟಲಲ್ಲಿ ಇಟ್ಟಂತೆ ಆಗಿದೆ, ಅಷ್ಟೇ. ಈ ಐದರ ವಿಷಯದಲ್ಲೂ ನಮ್ಮ ಸರ್ಕಾರ ಈಗಾಗಲೇ ಸಂಪೂರ್ಣವಾಗಿ ವಿಫಲವಾಗಿದೆ. ಹಿಂದೆಯೂ ಈ ಪ್ರಚಾರಗಳಿದ್ದವು. ಹಿಂದೆ ಮಂತ್ರಿಗಳಾಗಿದ್ದ ಬನವಲಿಂಗಪ್ಪ ಅವರು ಆ ವರ್ಷದ ಆಗಸ್ಟ್ 15 ರೊಳಗಾಗಿ ನಿವೇಶನವಿಲ್ಲದವರಿಗೆ ನಿವೇಸನವನ್ನು ಹಂಚುವುದಾಗಿ ಹೇಳಿ ಅವರು 8–9 ಲಕ್ಷ ಮನೆಗಳ ನಿವೇಶನವನ್ನು ಹಂಚಿಕೆಮಾಡಿದ್ದುಂಟು. ಅವರು 50 ಲಕ್ಷಮನೆಗಳನ್ನೂ ಸಹಾ ಕಟ್ಟಿಸಿಕೊಡುವುದಾಗಿ ಹೇಳಿದ್ದರು. ಆದರೆ ಅಲ್ಲಿಂದಿತ್ತೀಚೆಗೆ ಈ ಕಾರ್ಯ ಆ ಪ್ರಮಾಣದಲ್ಲಿ ನಡೆಯಲೇ ಇಲ್ಲ ಇದು ಅಷ್ಟಕ್ಕೇ ಸ್ಥಬ್ಧವಾಯಿತು. ಆ ವಿಚಾರವಾಗಿ ಈ ಭಾಷಣದಲ್ಲಿ ಒಂದು ಚಕಾರಕೂಡ ಹೇಳಿಲ್ಲ. ಅದುದರಿಂದ ಯಾರೂ ಹೇಳದೆ ಇದ್ದುದನ್ನು ಇಂದು ನಮಗೆ ರಾಜ್ಯಪಾ ಲರು ಹೇಳಲಲ್ಲ. ಅವರೆ ಹಿಂದಾದರೂ ಅವರು ಮಾಡಿದ್ದೇನು ? ಆ ಒಂದುಗಡಿಬಿಡಿಯಲ್ಲಿ ಆ ನಿವೇಶ ನಗಳನ್ನು ಹಂಚತಕ್ಕ ಬಗ್ಗೆ ಮತ್ತು ಜಮೀನನು ಹಂಚತಕ್ಕ ಬಗ್ಗೆ ಯಾವುದೊಂದನ್ನೂ ಖಚಿತವಾಗಿ ವಿಮರ್ಶೆಮಾಡಿಕೊಳ್ಳದೆ ಅದು ಯಾರ ಜಮೀನು—ಅದೇನು ಸರ್ಕಾರದ್ದೇ, ಖಾಸಗೀ ಜನರದೇ ಗ್ರಾಮಠಾಣವೇ ಎಂಬುದನ್ನು ನೋಡದೆ ಹಂಚಿಕೆ ಮಾಡಿದ್ದರಿಂದ ಈ ದಿವಸ ಏನಾಗಿದೆ ಅಂದರೆ ರೈತರಿಗೆ... .....

MADAM SPEARER.—The House will now adourn to meet tomorrow at 8–30 A.M.

---

*The House adjourned at Thirty Minutes past One of the Clock to meet again at Thirty Minutes past Eight of the Clock, on Friday, the 14th February 1975.*

---

WD 2093—GPB—550 - 30-5-1975